# 7

# ಒಂದು ಹೊಸ ಒಡಂಬಡಿಕೆ

## (ಯೆರೆಮೀಯ 31)

ದೇವರು ತನ್ನ ಜನರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು, ಅದನ್ನು ನೆರವೇರಿಸುವನು ಎಂದು ಹಳೆ ಒಡಂಬಡಿಕೆಯಲ್ಲಿ ಗಮನಿಸುತ್ತೇವೆ. ದೇವರು ತನ್ನ ಕೃಪಾವರವನ್ನು ಹಾಗೂ ತನ್ನ ಆಶೀರ್ವಾದವನ್ನು ನೀಡುವದಕ್ಕಾಗಿ ಕರೆದು ಅದನ್ನು ಉದಾರವಾಗಿ ನೀಡುವನು ಎಂಬುದು "ಆತನ ಒಪ್ಪಂದವಾಗಿರುತ್ತದೆ."

### ದೇವರ ನಾಲ್ಕು ಹಾಗೂ ಮತ್ತೊಂದು ಒಡಂಬಡಿಕೆ

ದೇವರು ಮಾಡಿದ ನಾಲ್ಕು ಒಡಂಬಡಿಕೆಗಳನ್ನು ಹಳೆ ಒಡಂಬಡಿಕೆಯಲ್ಲಿ ವಿವರಿಸಲಾಗಿದೆ:

1. *ನೋಹನೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆ.* ಆದಿಕಾಂಡ 6:18ರಲ್ಲಿ ಮುಂದೆ ಬರಲಿರುವ ಜಲಪ್ರಳಯದಿಂದ ನೋಹನ ಕುಟುಂಬವನ್ನು ರಕ್ಷಿಸುವನೆಂಬ ಒಡಂಬಡಿಕೆಯನ್ನು ಮಾಡಿಕೊಂಡನು. ನಂತರದಲ್ಲಿ (ಆದಿಕಾಂಡ 9:11) ಇನ್ನೆಂದಿಗೂ ಪ್ರಳಯದಿಂದ ಅವರನ್ನು ನಾಶಮಾಡುವದಿಲ್ಲ ಎಂಬ ಒಡಂಬಡಿಕೆಯನ್ನು ಮಾಡಿಕೊಂಡನು.

2. *ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆ.* ಆದಿಕಾಂಡ (ಅಧ್ಯಾಯ 12; 15; 17)ರಲ್ಲಿ, ದೇವರು ಅಬ್ರಹಾಮನನ್ನು ಕರೆದು ಅವನನ್ನು ದೊಡ್ಡ ಜನಾಂಗವನ್ನಾಗಿ ಮಾಡುವೆನು ಎಂದು ಹೇಳಿದನು, ಮತ್ತು ಅವನನ್ನು ಆಶೀರ್ವದಿಸಿ ಅವನ ಮೂಲಕ ಇತರರನ್ನು ಆಶೀರ್ವದಿಸುವೆನೆಂದು ವಾಗ್ದಾನಮಾಡಿದನು. ಈ ಒಡಂಬಡಿಕೆಯ ಮುಖಾಂತರ ಇಸ್ರಾಯೇಲ್ ದೇಶವು ಸ್ಥಾಪನೆಗೊಂಡಿತು, ಅವರು ಅಬ್ರಹಾಮನ ದೈಹೀಕವಾದ ಸಂತತಿಯಾಗಿದ್ದು, ಅವರ ಮೂಲಕ ಕ್ರಿಸ್ತನು ಬರಲಿದ್ದನು. ಈ ವಿಧವಾಗಿ ಲೋಕದವರೆಲ್ಲರಿಗೆ ಆಶೀರ್ವಾದ ಉಂಟಾಯಿತು.

3. *ದೇವರು ದಾವೀದನೊಂದಿಗೆ ಮಾಡಿಕೊಂಡ ಒಡಂಬಡಿಕೆ.* 2 ಸಮುವೇಲ 7ರಲ್ಲಿ, ದಾವೀದನು ದೇವರಿಗಾಗಿ ಒಂದು ಆಲಯವನ್ನು (ದೇವಾಲಯ) ಕಟ್ಟುವೆನೆಂದು ಅಭಿಲಾಷೆ ಹೊಂದಿದ್ದನು, ಹೌದು ಅವನು "ಆಲಯವನ್ನು" ಕಟ್ಟುವನು (ಒಂದೇ ಸಾಮ್ರಾಜ್ಯ) ಎಂದು ದೇವರು ಹೇಳಿದನು, ಕರ್ತನಾದ ಯೇಸುವಿನ ಮೂಲಕ ಈ ಒಡಂಬಡಿಕೆ ನೆರವೇಲಿತು, ಆತನು "ದಾವೀದನ ಮಗನು" ಆತನು ನಿರಂತರ ಆಳುವನು.

4. *ದೇವರು ಇಸ್ರಾಯೇಲ್ಯರ ಸಂಗಡ ಮಾಡಿಕೊಂಡ ಒಡಂಬಡಿಕೆ.* ಸೀನಾಯಿ ಪರ್ವತದ ಮೇಲೆ ದೇವರು ಇಸ್ರಾಯೇಲ್ಯರ ಸಂಗಡ ಹಳೆ ಒಡಂಬಡಿಕೆಯನ್ನು ಮಾಡಿಕೊಂಡನು 400 ವರ್ಷಗಳ ನಂತರ, ಅವರನ್ನು ಐಗುಪ್ತದಿಂದ ಬಿಡಿಸಿದಾಗ ಈ ಒಡಂಬಡಿಕೆಯನ್ನು ಮಾಡಿಕೊಂಡು (ವಿಮೋಚನಕಾಂಡ 20). ದೇವರು ಇಸ್ರಾಯೇಲ್ಯರಿಗೆ ದೇವರು ಮತ್ತು ಅವರನ್ನು ತನ್ನ ಪ್ರಜೆಗಳೆಂಬ ವಾಗ್ದಾನಗಳನ್ನು ಮಾಡಿ, ಆತನು ಮೋಶೆಯ ಮುಖಾಂತರ ನೀಡಿದ ಕಟ್ಟಳೆಗಳಿಗೆ ಅವರು ವಿಧೇಯರಾಗಬೇಕೆಂಬದೇ, ಈ ಒಡಂಬಡಿಕೆಯನ್ನು ಮೋಶೆಯ ಮೂಲಕ ನೀಡಿದ ನಿಮಿತ್ತವಾಗಿ, ಮೋಶೆಯೇ ಮುಖ್ಯ ಕೇಂದ್ರ ಬಿಂದುವಾಗಿರುವದರಿಂದ, ಅದನ್ನು "ಮೋಶೆಯ ಕಟ್ಟಳೆಗಳು" ಎಂದು ವ್ಯಾಖ್ಯಾನಿಸಲಾಗಿದೆ. ಹೌದು, ಅದು ಮೋಶೆಯ ಮತ್ತು ದೇವರ ನಡುವಿನ ಒಪ್ಪಂದ ಮಾತ್ರವಾಗಿರದೇ ಅದು ಇಸ್ರಾಯೇಲ್ ಜನಾಂಗಕ್ಕೂ

ಮತ್ತು ದೇವರಿಗೂ ನಡುವೆ ಉಂಟಾದ ಒಡಂಬಡಿಕೆಯಾಗಿರುತ್ತದೆ.

ಅದೇ ರೀತಿಯಲ್ಲಿ ಮತ್ತೊಂದು ಐದನೆಯ ಒಡಂಬಡಿಕೆಯ ಮುಂದೆ ಬರಲಿದೆ ಎಂದು ಹಳೇ ಒಡಂಬಡಿಕೆಯು ತಿಳಿಸುತ್ತದೆ, ಆದರೆ ಅದು ಹಳೇ ಒಡಂಬಡಿಕೆಯು ಬರೆಯಲ್ಪಡುವ ಸಮಯದಲ್ಲಿ ನೆರವೇರಲಿಲ್ಲ. ಈ ಹೊಸ ಒಡಂಬಡಿಕೆಯ ಕುರಿತು ಯೆರೆಮೀಯ 31:31-34 ರಲ್ಲಿ ತಿಳಿಸಲಾಗಿದೆ: "ಇಗೋ, ನಾನು ಇಸ್ರಾಯೇಲ್ ವಂಶದವರಿಗೂ ಯೆಹೂದ ವಂಶದವ ರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು ..."

ಮುಂದೆ ಬರುವಂಥ ದೇವರ ನ್ಯಾಯತೀರ್ಪಿನ ಬಗ್ಗೆ ಯೆರೆಮೀಯನು 29 ಅಧ್ಯಾಯಗಳಲ್ಲಿ ತಿಳಿಸಿರುವನು. ಅದನ್ನು ಅವಿಧೇಯರಾದ ಇಸ್ರಾಯೇಲ್ಯರಿಗೆ ತಿಳಿಸಿರುವನು. ಈಗಾಗಲೇ ಉತ್ತರ ರಾಜ್ಯವನ್ನು (ಇಸ್ರಾಯೇಲ್) ಅಶ್ಶೂರ್ಯರು ವಶಪಡಿಸಿಕೊಂಡಿದ್ದರು, ಈಗ ದಕ್ಷಿಣದ (ಯೆಹೂದ) ರಾಜ್ಯವು ಬಾಬೆಲೋನಿಯದವರಿಂದ ನಾಶಕ್ಕೆ ಒಳಗಾಗಿತ್ತು. ಈ ಮುಂದೆ ಬರಲಿದ್ದ ಇಂತಹ ನಾಶನದ ಕರಿತು ಹಳೇ ಒಡಂಬಡಿಕೆಯು ಅನೇಕ ಪ್ರವಾದಿಗಳು ಮುಂತಿಳಿಸಿದ್ದರು. ಅವರು ಸೆರೆಯಾಗಿ ಹೋದ ನಂತರದಲ್ಲಿ ಉತ್ತಮವಾದ ದಿವಸಗಳು ಬರುವವೆಂದು ಭರವಸವನ್ನು ಹೊಂದಿದ್ದರು. ನಾಶನವು ಸಂಭವಿಸಲೇಬೇಕಿತ್ತು, ಆದರೆ ದೇವರು ಇಸ್ರಾಯೇಲ್ಯರಿಗೆ ಅಂತ್ಯವನ್ನು ತರಲಿಲ್ಲ; ಪುನಃ ಅವರನ್ನು ಆಶೀರ್ವದಿಸುವನೆಂದು ದೇವರು ಹೇಳಿದನು.

ಇತರೆ ಪ್ರವಾದಿಗಳಂತೆ ಯೆರೆಮೀಯನ ಪ್ರವಾದನೆಗಳು ನಾಶನ ಮತ್ತು ನಿರೀಕ್ಷೆಯನ್ನು ಹೊಂದಿದ್ದವು. ಅಧ್ಯಾಯ 1 ರಿಂದ 29 ರಲ್ಲಿ ಅವನು ಪ್ರವಾದನೆ ಮಾಡಿ ತಿಳಿಸಿದ ನಾಶನದ ಕುರಿತಾದ ದಾಖಲೆಗಳಿರುತ್ತವೆ, ಅಧ್ಯಾಯ 30ರಲ್ಲಿ ನಿರೀಕ್ಷೆಯ ಸಂದೇಶವು ಆರಂಭವಾಗುತ್ತದೆ:

> ಇಸ್ರಾಯೇಲ್ಯರ ದೇವರಾದ ಯೆಹೋವನು ಇಂತೆನ್ನುತ್ತಾನೆ - ನಾನು ನಿನಗೆ ಹೇಳಿರುವ ಮಾತುಗಳನ್ನೆಲ್ಲಾ ಗ್ರಂಥವಾಗಿ ಬರೆ. ಇಗೋ ನಾನು ನನ್ನ ಜನರಾದ ಇಸ್ರಾಯೇಲ್ಯರನ್ನೂ ಯೆಹೂದ್ಯರನ್ನೂ ಅವರ ದುರವಸ್ಥೆಯಿಂದ ತಪ್ಪಿಸುವ ದಿನಗಳು ಬರುವವು. ಆಗ ನಾನು ಅವರನ್ನು ಅವರ ಪಿತೃಗಳಿಗೆ ಅನುಗ್ರಹಿಸಿದ ದೇಶಕ್ಕೆ ಪುನಃ ಬರಮಾಡುವೆನು. ಅವರು ಅದನ್ನು ಅನುಭವಿಸುವರು. ಇದು ಯೆಹೋವನ ನುಡಿ (2, 3 ವಚನಗಳು).

ಅಪಾಯಗಳ ನಂತರ ಈ ವಿಧವಾದ ಪುನಸ್ಥಾಪನೆಯು ಹಳೆ ಒಡಂಬಡಿಕೆಯಲ್ಲಿನ ವಿಭಿನ್ನವಾದ ಸಂಗತಿಯಾಗಿರುತ್ತದೆ, ಆದರೆ ಯೆರೆಮೀಯನು ಒಂದು ನಿರ್ದಿಷ್ಟವಾದ ಕೊಡುಗೆಯನ್ನು ಈ ಪುನಃ ಸ್ಥಾಪನೆಯ ನಿರೀಕ್ಷೆಗೆ ನೀಡಿರುವನು. ಯೆರೆಮೀಯನು 31:31-34 ರಲ್ಲಿ ದೇವ ಜನರು ಹಾಗೂ ದೇವರ ನಡುವೆ ಉಂಟಾದ ಒಡಂಬಡಿಕೆಯ ಸಂಗತಿಗಳನ್ನು ಮುಂದಾಗಿಯೇ ತಿಳಿಸಲಾಗಿದೆ. ಯೆರೆಮೀಯನ ಪ್ರಕಾರ, ಇಸ್ರಾಯೇಲ್ಯರಿಗೆ ಸಂಬಂಧಪಟ್ಟ ನೂತನ ಮಾರ್ಗದರ್ಶನವು ಹಳೆಯ ಒಡಂಬಡಿಕೆಯಲ್ಲಿ ತಿಳಿಸಿರುವ ಆಶೀರ್ವಾದಕ್ಕಿಂತಲೂ ಹೆಚ್ಚಿನ ಆಶೀರ್ವಾದವನ್ನು ಒಳಗೊಂಡಿತ್ತು ಎಂದು ಗಮನಿಸುತ್ತೇವೆ.

> ಯೆಹೋವನು ಇಂತೆನ್ನುತ್ತಾನೆ - ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಕೆಯು ನಾನು ಇವರ ಪಿತೃಗಳನ್ನು ಕೈ ಹಿಡಿದು ಐಗುಪ್ತ ದೇಶದೊಳಗಿಂದ ಕರೆತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ. ಯೆಹೋವನು ಇಂತೆನ್ನುತ್ತಾನೆ - ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ

ಒಡಂಬಡಿಕೆಯು ಹೀಗಿ ರುವದು - ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು - ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ. ಇದು ಯೆಹೋವನ ನುಡಿ.

## ಯೆರೆಮೀಯನು ಮಾಡಿದ ಹೊಸ ಒಡಂಬಡಿಕೆಯ ಕುರಿತಾದ ಪ್ರವಾದನೆ

ಹಳೆ ಒಡಂಬಡಿಕೆ ಬದಲಾಗಿ, ಹಳೆ ಒಡಂಬಡಿಕೆಯಲ್ಲಿ ಅಂದರೆ ಯೆರೆಮೀಯ 31 ರಲ್ಲಿ ಹುಡುಗಿರುವ "ಹೊಸ" ಒಡಂಬಡಿಕೆಯು ಯಾವುದು? ಹೊಸ ಒಡಂಬಡಿಕೆಯ ಪ್ರಮುಖವಾದ ಅನೇಕ ಸ್ವಭಾವಗಳ ಕುರಿತು ಯೆರೆಮೀಯನು ಪ್ರವಾದಿಸಿರುವನು:

1. *ಅದು ಭವಿಷ್ಯದಲ್ಲಿ ಬರುವದಕ್ಕಿದ್ದ ಸಂಗತಿಯಾಗಿತ್ತು.* ಯೆರೆಮೀಯನು ನಿರ್ದಿಷ್ಟವಾದ ಸಮಯದ ಕುರಿತು ಹೇಳದೆ; "ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು ..." ಎಂದು ಹೇಳಿದನು (31:31). ಅನಿರ್ಧಿಷ್ಟವಾದ ಸಮಯದ ಕುರಿತು ಪ್ರವಾದಿಯ ಮಾತುಗಳಲ್ಲಿ ಆಶ್ಚರ್ಯವಿದೆ. "ಮುಂದಿನ ದಿನಗಳಲ್ಲಿ ಅಥವಾ ನಂತರದ ದಿನಗಳಲ್ಲಿ" ಎಂದು ದೇವರು ಹೇಳಿರುವ ಹೇಳಿಕೆಯಲ್ಲಿ, ದೇವರು ಜನರನ್ನು ಮತ್ತೊಂದು ಸಾರಿ ಅವರ ಮೇಲೆ ಕೃಪೆ ತೋರುವನು ಎಂಬ ಅರ್ಥವನ್ನು ಕಾಣುತ್ತೇವೆ. ಈ ಹೊಸ ಒಡಂಬಡಿಕೆಯ ಕುರಿತು ಯೆರೆಮೀಯನು ನಿರ್ದಿಷ್ಟವಾದ ಸಮಯವನ್ನು ತಿಳಿಸದೆ ಹೋದರೂ, ಅದು ಮೆಸ್ಸೀಯನು ಆಗಮಿಸುವ ಸಮಯವೇ ಎಂಬ ಅರ್ಥವನ್ನು ಜನರಿಗೆ ತಿಳಿಸುತ್ತದೆ. ಅಭಿಷೇಕಿಸಲ್ಪಟ್ಟವನು ಹೊಸ ಒಡಂಬಡಿಕೆಯ ಕಾಲದಲ್ಲಿಯೇ ಉದಯವಾಗುವನು.

2. *ಈ ಘಟನೆಯು ಯೆಹೂದ ಹಾಗೂ ಇಸ್ರಾಯೇಲ್ ಜನರನ್ನು ಒಗ್ಗೂಡಿಸುತ್ತದೆ.* ಇದರ ಕುರಿತು ಯೆರೆಮೀಯನು, "ಇಸ್ರಾಯೇಲ್ ಹಾಗೂ ಯೆಹೂದ ವಂಶದವರೊಂದಿಗೆ ಒಂದು ಒಡಂಬಡಿಕೆ" ಎಂದು ತಿಳಿಸಿರುವನು (ವಚನ 31). ಎರಡು ಕಾರಣಗಳಿಗಾಗಿ ಈ ವಾಗ್ದಾನವನ್ನು ನೀಡಲಾಗಿದೆ ಮೊದಲನೆಯದಾಗಿ ಈ ಜನಾಂಗಗಳವರು ಸೊಲೋಮೋನನ ಸಮಯದಿಂದ ಸುಮಾರು ಮುನ್ನೂರು ವರ್ಷಗಳ ಕಾಲ ಇಬ್ಭಾಗವಾಗಿದ್ದರು. ಎರಡನೆಯದಾಗಿ, ಇಸ್ರಾಯೇಲ್ಯರ ಹತ್ತುಕುಲಗಳಿಂದ ನಿರ್ಮಿತವಾಗಿದ್ದ ದಕ್ಷಿಣದ ರಾಜ್ಯವು ಎಂದಿಗೂ ಒಂದು ರಾಜಕೀಯ ಸ್ಥಾನವನ್ನು ಪಡೆಯಲು ಅಸಾಧ್ಯವಾಯಿತು. ಅಶೂರ್ಯರು ಆ ಕುಲಗಳನ್ನು ವಶಪಡಿಸಿಕೊಂಡ ನಂತರ, ಅವುಗಳು ಚದುರಿಹೋದವು. ಈ ಕುಲಗಳನ್ನು ಪುನಃ ಸ್ಥಾಪನೆ ಮಾಡುವದು ಹಾಗೂ ಅವರನ್ನು ರಾಜಕೀಯವಾಗಿ ದೃಢಪಡಿಸುವದು ಸೀಮಿತವಾಗಿರಲಿಲ್ಲ. "ಇಸ್ರಾಯೇಲ್ಯರನ್ನು ಎಲ್ಲ ಜನಾಂಗದೊಂದಿಗೆ ಒಂದಕ್ಕೆ ಮಾಡಿರುವನು ಎಂಬ ಮಾರ್ಗಸೂಚಿಯನ್ನು ಯೆರೆಮೀಯನು ನೀಡಿರುವನು." (3:16-18; ಪ್ರಪಂಚದ ವಾಗ್ದಾನದ ಕುರಿತು ಯೆರೆಮೀಯ 31ರಲ್ಲಿ ತಿಳಿಸಿರುವದಿಲ್ಲ.)

3. *ಅದು ಜನರ ಹೃದಯದಲ್ಲಿ ಸದಾಕಾಲ ಇರುವದು.* ಇಸ್ರಾಯೇಲ್ಯರು ಮಾಡಬೇಕಾದ ಕರ್ತವ್ಯದ ಕುರಿತು ನೀತಿ ನಿಯಮಗಳನ್ನು ಹಳೆ ಒಡಂಬಡಿಕೆಯಲ್ಲಿ ಒಳಪಡಿಸಲಾಗಿತ್ತು. ಈ ನಿಯಮಗಳನ್ನು ಅವರು ಪಾಲಿಸುವದರಿಂದ, ಅವರು ದೇವರಿಗೆ ಪರಿಶುದ್ಧ ಜನಾಂಗವಾಗುತ್ತಿದ್ದರು. "ಈ ವಿಧಿ ವಿಧಾನಗಳನ್ನು ಅವರಲ್ಲಿ ಇಟ್ಟು, ಅವರ ಹೃದಯಗಳಲ್ಲಿ ಬರೆಯುವೆನು ..." ಎಂಬ ದೇವರ ಮಾತನ್ನು ಯೆರೆಮೀಯನು ತಿಳಿಸಿರುವನು (ವಚನ 33). ಇನ್ನೊಂದು ಅರ್ಥದಲ್ಲಿ, ಹೊಸ ಒಡಂಬಡಿಕೆಯು ಜನರ ಜೀವಿತದ ಒಂದು ಭಾಗವಾಗಿತ್ತು, ಆದ್ದರಿಂದ

ಅವರು ಹೃದಯ ಪೂರ್ವಕವಾಗಿ ದೇವರನ್ನು ಸೇವಿಸುವ ಸಾಧ್ಯತೆಯಿತ್ತು, ಹೇಗೂ, "ಹೃದಯ ಧರ್ಮ" ಎಂಬ ಮುಖ್ಯಾಂಶದಲ್ಲಿ, ಹೊಸ ಅಂಶವೇನನ್ನು ಹಳೇ ಒಡಂಬಡಿಕೆಯಲ್ಲಿ ಕಾಣುವದಿಲ್ಲ, ಹೇಗೂ ಧರ್ಮೋಪದೇಶಕಾಂಡ 30:6ರಲ್ಲಿ ಮೋಶೆಯು, "... ನಿಮ್ಮ ದೇವ ರಾದ ಯೆಹೋವನು ನಿಮ್ಮ ಮತ್ತು ನಿಮ್ಮ ಸಂತತಿಯವರ ಹೃದಯಕ್ಕೆ ಸುನ್ನತಿ ಮಾಡುವನು. ಆಗ ನೀವು ಆತನನ್ನು ಸಂಪೂರ್ಣವಾದ ಹೃದಯದಿಂದಲೂ ಮನಸ್ಸಿನಿಂದಲೂ ಪ್ರೀತಿಸಿ ಬದುಕಿಸಿಕೊಳ್ಳುವಿರಿ." ಎಂದು ಬರೆದನು. ಆದರೆ ದೇವರ ಇಚ್ಛೆಯ ಮೇರೆಗೆ ದೇವ ಜನರು ತಮ್ಮ ಹೃದಯದಲ್ಲಿ ಒಡಂಬಡಿಕೆಯನ್ನು ಕಾಪಾಡಿಕೊಳ್ಳಲಿಲ್ಲ - ಆದರೆ ಹೊಸ ಒಡಂಬಡಿಕೆಯ ಮೂಲಕ ಈ ಕಾರ್ಯವು ನೆರವೇರುವದು ಎಂದು ಯೆರೆಮೀಯನು ತಿಳಿಸಿದನು.

4. *ಅದನ್ನು ಇನ್ನೊಬ್ಬರಿಂದ ಕಲಿಯುವದಕ್ಕಿಂತಲೂ, ಅದನ್ನು ಎಲ್ಲರೂ ತಮ್ಮ ಹೃದಯಗಳಲ್ಲಿ ಅರಿತುಕೊಳ್ಳುವರು.* "ನೆರೆಹೊರೆಯವರು ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು - ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನೂ ಮೇಲೆ ಬೋಧಿಸಬೇಕಾಗಿ ರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂನನ್ನ ಜ್ಞಾನವನ್ನು ಪಡೆದಿರುವರು ..." (ವಚನ 34). ಹಳೇ ಒಡಂಬಡಿಕೆಯ ಅವಧಿಯಲ್ಲಿ, ಅಬ್ರಹಾಮನ ಸಂತಾನದವರಾದ ಇಸ್ರಾಯೇಲ್ಯರು - ಒಡಂಬಡಿಕೆಯ ಜನರಾಗಿದ್ದರು; ಆದರೆ ಅವರ ಮುದಿನ ಪ್ರತಿ ಸಂತಾನದವರಿಗೆ, ದೇವರ ಮಾರ್ಗಗಳನ್ನು ಪ್ರತಿಸಲವೂ ಬೋಧಿಸಬೇಕಿತ್ತು. ಆದರೆ ಹೊಸ ಒಡಂಬಡಿಕೆಯ ಅವಧಿಯಲ್ಲಿ, ಅದರಲ್ಲಿ ಸೇರಿರುವವರೆಲ್ಲರೂ, "ದೇವ ರನ್ನು ಅರಿಯುವ ಸಾಧ್ಯತೆಯಿದೆ" ಆದ್ದರಿಂದ ಅವರು ಒಡಂಬಡಿಕೆಯಲ್ಲಿ ಸೇರಿದ ಜನರಾಗಿ ರುವರು.

5. *ಅದು ಎಂದಿಗೂ ಮುರಿಯಲ್ಪಡವದಿಲ್ಲ.* ವಚನ 32ರಲ್ಲಿ ಯೆರೆಮೀಯನು "ಇವರ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಯಂತಿರುವದಿಲ್ಲ." ಏಕೆಂದರೆ ಅವರು ಅದನ್ನು ಮುರಿದರು. ಹಳೆ ಒಡಂಬಡಿಕೆಯನ್ನು ಅವರು ಪದೇ ಪದೇ ಮುರಿದರು ಎಂಬ ನೆನಪಿರುತ್ತದೆ. ಇದರ ಕುರಿತಾಗಿ ದೇವರು ತನ್ನದೇ ಆದ ಅಭಿಪ್ರಾಯವನ್ನು ಹೊಂದಿದ್ದರೂ, ಅವರು ಯಾವಾ ಗಲೂ ಅಪನಂಬಿಗಸ್ತರೇ ಆಗಿದ್ದರು. ಒಡಂಬಡಿಕೆಯು ಸ್ಥಾಪನೆಗೊಂಡ ನಂತರವೇ ಅವಿಧೇಯತೆಯ ಬಹಳವಾಯಿತು, ವಿಮೋಚನಕಾಂಡ 32ರ ಪ್ರಕಾರ, ಅವರು ಬಸವನ ಪೂಜೆಯನ್ನು ಮಾಡುವದರ ಮೂಲಕ, ಅಪರಾಧವು ಚರಿತ್ರೆಯಲ್ಲಿ ಆರಂಭವಾಯಿತು. ಅದರ ಪರಿಣಾಮವನ್ನು ಸ್ತೆಫನನು ಅಪೊಸ್ತಲರ ಕೃತ್ಯಗಳು 7ನೇ ಅಧ್ಯಾಯದಲ್ಲಿ ಪ್ರಸಂಗಿಸುವಾಗ ಕಾಣುತ್ತೇವೆ, ಇಸ್ರಾಯೇಲ್ಯರ ಇತಿಹಾಸದಲ್ಲಿ ಅವರು ಸೋತುಹೋದರು ಎಂಬುದನ್ನು ತೋರಿ ಸುವದ್ಕಾಗಿ ಸ್ತೆಫನನು ಮಾತನಾಡಿ:

> ಚಂಡಿಗಳೇ, ಮನಶ್ಶುದ್ಧಿಯೂ ಕರ್ಣಶುದ್ಧಿಯೂ ಇಲ್ಲದವರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವೂ ಯಾವಾಗಲೂ ಪವಿತ್ರಾತ್ಮನನ್ನು ಎದುರಿಸುವವರಾಗಿದ್ದೀರಿ. ಪ್ರವಾದಿ ಗಳಲ್ಲಿ ನಿಮ್ಮ ಪಿತೃಗಳು ಹಿಂಸೆಪಡಿಸದವರು ಯಾರಿದ್ದಾರೆ? ಅವರು ಆ ನೀತಿ ಸ್ವರೂಪನ ಆಗಮನದ ವಿಷಯದಲ್ಲಿ ಮುಂತಿಳಿಸಿದವರನ್ನು ಕೊಂದರು, ನೀವು ಈಗ ಆತನನ್ನು ಹಿಡುಕೊಟ್ಟು ಕೊಂದವರಾದಿರಿ. ದೇವದೂತರ ಮೂಲಕ ನೇಮಕವಾದ ಧರ್ಮಶಾಸ್ತ್ರವನ್ನು ನೀವು ಹೊಂದಿದವರಾದರೂ ಅದನ್ನು ಅನುಸರಿಸುವದಿಲ್ಲ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 7:51-53).

ದೇವರು ನೀಡುವ ಹೊಸ ಒಡಂಬಡಿಕೆಯಲ್ಲಿ ವ್ಯತ್ಯಾಸವುಳ್ಳದ್ದಾಗಿದ್ದು, ಅದು ಎಂದಿಗೂ ಮುರಿಯದ ಒಡಂಬಡಿಕೆಯಾಗಿತ್ತು ಎಂದು ಯೆರೆಮೀಯನು ಹೇಳುತ್ತಿರುವನು.

6. *ಅದು ಎಂದಿಗೂ ಅಂತ್ಯಗೊಳ್ಳುವದಿಲ್ಲ.* ಹೊಸ ಒಡಂಬಡಿಕೆಯಲ್ಲಿನ ವಾಗ್ದಾನಗಳನ್ನು ಯೆರೆಮೀಯನು ಪ್ರಕಟಮಾಡುತ್ತಾ: "ದೇವರು ಸೃಷ್ಟಿಯನ್ನು ದೃಢವಾಗಿ ನೇಮಿಸಿರುವನು;

(ವಚನ 35). ಈ ಕಟ್ಟಳೆಗಳು ನನ್ನ ಪರಾಂಬರಿಕೆಗೆ ಬಾರದೆ ತೊಲಗಿಹೋದರೆ, ಆಗ ಇಸ್ರಾಯೇಲ್ ಸಂತಾನವು ನನ್ನ ಪರಾಂಬರಿಕೆಗೆ ಬಾರದೆ ಎಂದಿಗೂ ಜನಾಂಗವಾಗದೆ ಹೋಗುವದು'' (ವಚನ 36). ಹೊಸ ಒಡಂಬಡಿಕೆಯ ನಿತ್ಯತ್ವವನ್ನು ಹಳೆಒಡಂಬಡಿಕೆಗೆ ಹೋಲಿಸಲಾಗದು. ಈ ಹೊಸ ಒಡಂಬಡಿಕೆಯ ಸ್ಥಾಪನೆಯಿಂದ, ಮತ್ತೊಂದು ಒಡಂಬಡಿಕೆಯ ಅಗತ್ಯವಿರುವದಿಲ್ಲ.

7. *ಅದು ಪೂರ್ಣವಾದ ಕ್ಷಮಾಪಣೆಯನ್ನು ನೀಡುತ್ತದೆ.* ವಚನ 34ರ ಅಂತ್ಯದಲ್ಲಿ ಹೊಸ ಒಡಂಬಡಿಕೆಯ ಪೂರ್ಣ ಪ್ರಮಾಣದ ವಾಗ್ದಾನವನ್ನು ಗಮನಿಸುತ್ತೇವೆ. "ನಾನು ಅವರ ಅಪ ರಾಧವನ್ನು ಕ್ಷಮಿಸುವೆನು, ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ.'' ಅವರು ಸಕಲ ನಿಯಮಗಳನ್ನು ಮೀರಿದ್ದರೂ, ಪಾಪಕ್ಷಮೆಯು ಮಹತ್ವದ್ದಾಗಿದೆ.

## ದೇವರ ಹೊಸ ಒಡಂಬಡಿಕೆಯ ಸ್ಥಾಪನೆ

ಈ ಹೊಸ ಒಡಂಬಡಿಕೆಯ ಕುರಿತು ಯೆರೆಮೀಯನು ನಿರ್ಧಿಷ್ಟವಾದ ಸಮಯವನ್ನು ತಿಳಿಸಿರುವದಿಲ್ಲ. ಹೊಸ ಒಡಂಬಡಿಕೆಯ ಬರಹಗಾರರು ಸಹ ಆ ಸಮಯದ ಕುರಿತು ತಿಳಿಸಿರುವದಿಲ್ಲ; ಆ ಹೊಸ ಒಡಂಬಡಿಕೆಯು ಯೇಸುವಿನ ಶಿಲುಬೆಯ ಮರಣದಲ್ಲಿ ಸ್ಥಾಪನೆಗೊಂಡಿತು ಎಂದು ತಿಳಿಸಿರುವರಷ್ಟೆ. ಯೇಸು ತನ್ನ ಶಿಷ್ಯರ ಸಂಗಡ ಕಡೆಯ ಭೋಜನ ವನ್ನು ಮಾಡಿದ ಸಮಯದಲ್ಲಿ, ಆತನ ಅನುಯಾಯಿಗಳು ಅದನ್ನು ಚಾಚುತಪ್ಪದೆ ಮಾಡ ಬೇಕೆಂದು ಅಪ್ಪಣೆ ನೀಡಿದನು ಆತನ ಮರಣದಲ್ಲಿ ಯೆರೆಮೀಯನು ಮುಂತಿಳಿಸಿದ ಹೊಸ ಒಡಂಬಡಿಕೆಯ ತತ್ವವು ಅಡಕವಾಗಿದೆ: "ಮತ್ತು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು - ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾ ಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ'' (ಲೂಕ 22:20).

ಯೇಸುವಿನ ಬರೋಣದಿಂದಲೂ, ಆತನ ಮರಣದಿಂದಲೂ ಹೊಸ ಒಡಂಬಡಿಕೆಯ ಸ್ಥಾಪನೆಯು ಉಂಟಾಯಿತು ಎಂದು ಹೊಸ ಒಡಂಬಡಿಕೆಯಲ್ಲಿ ವ್ಯಾಖ್ಯಾನವಿರುತ್ತದೆ. ಯೆರೆಮೀಯನು ಮುಂತಿಳಿಸಿದ ವಾಗ್ದಾನಗಳೆಲ್ಲವು (ಈ ಪ್ರಗತಿಯಲ್ಲಿ) ನೆರವೇರಿತು.

1. *ಮುಂತಿಳಿಸಿದಂತೆ ಹೊಸ ಒಡಂಬಡಿಕೆಯು ಕಾರ್ಯಗತವಾಯಿತು.* ಯೆರೆಮೀಯನು ಕಾಲದಿಂದ ಆರುನೂರು ವರ್ಷಗಳ ನಂತರ, ಅವನ ಮನಸ್ಸಿನಲ್ಲಿದ್ದ ಸಂಗತಿಗಳು ನೆರವೇರಿ ದವು (ಲೂಕ 22:20). ಲೂಕ 4:18, 19 ರಲ್ಲಿ, ಯೆಶಾಯ 61:1, 2ರ ಆತನ ಕುರಿತಾಗಿ ಮುಂತಿಳಿಸಿದ ಮೆಸ್ಸೀಯನ ಕುರಿತ ವಿಚಾರವನ್ನು ಗಮನಿಸುತ್ತೇವೆ. "ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ ಎಂದು ಹೇಳಿರುವನು'' (ಲೂಕ 4:21). ಯೇಸುವಿನ ಪ್ರವಾದನೆಯ ಕುರಿತು ಪೌಲನು ಬರೆದು:

> ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು (ಗಲಾತ್ಯ 4:4, 5).

ಹೊಸ ಒಡಂಬಡಿಕೆಯಲ್ಲಿನ ವಾತಾವರಣದಲ್ಲಿಯೇ, ಕ್ರೈಸ್ತರು ಜೀವಿಸುತ್ತಾರೆ (ಯೇಸುವಿನ ಮರಣದ ನಿಮಿತ್ತ). ಯೇಸುವಿನ ನಿಮಿತ್ತವಾಗಿ ಯೆರೆಮೀಯ 31ರ ವಾಗ್ದಾನವು ನಮಗೆಲ್ಲರಿಗೂ ಅನ್ವಹಿಸುತ್ತದೆ.

2. *ಹೊಸ ಒಡಂಬಡಿಕೆಯ ಜನರಿಗೆ ಪುನಶ್ಚೇತನವನ್ನು ತಂದಿರುತ್ತದೆ.* ಪುನಃ ಸ್ಥಾಪನೆಗೊಂಡ, "ಇಸ್ರಾಯೇಲ್ಯರಲ್ಲಿ,'' "ಸಕಲ ಜನಾಂಗಗಳು'' ದೇವರಲ್ಲಿ ಒಗ್ಗೂಡುವವು ಎಂದು ಯೆರೆಮೀಯನು ಮುಂತಿಳಿಸಿದನು (3:16-18). ಯೇಸುವಿನಲ್ಲಿರುವಂತಹ ವಿಶ್ವಾಸಿಗಳು

ಹಾಗೂ ಯೆಹೂದ್ಯ ಮತ್ತು ಅನ್ಯರೆಲ್ಲರೂ ಸೇರಿ "ಹೊಸ ಇಸ್ರಾಯೇಲ್ಯರಾಗಿ" ಹೊಸ ಒಪ್ಪಂದದ ಜನರಾಗುವರು ಎಂದು ಹೊಸ ಒಡಂಬಡಿಕೆಯು ಪ್ರಕಟಗೊಳಿಸುತ್ತದೆ. ಪೌಲನು ವಿವರಿಸಿ; "ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರಿಗೆ ಅಂದರೆ ದೇವರ ಇಸ್ರಾಯೇಲ್ಯರಿಗೆ ಶಾಂತಿಯೂ ಕರುಣೆಯೂ ಆಗಲಿ" (ಗಲಾತ್ಯ 6:15, 16; RSV). ರೋಮಾಪುರ 1:16ರಲ್ಲಿ, "ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದ್ದಾಗಿದೆ." ಪೌಲನು ಎಫೆಸದವರಿಗೆ ಬರೆಯುವಾಗ, "ನಿಮ್ಮನ್ನು ನಮ್ಮನ್ನು ಒಂದು ಮಾಡಿದವನಾದ ಆತನೇ ನಮಗೆ ಸಮಧಾನ ಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪ ವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿ ಹಾಕಿದನು" (ಎಫೆಸ 2:14). ಇನ್ನೊಂದು ಪದದಲ್ಲಿ "ಹೊಸ ಇಸ್ರಾಯೇಲ್" ಯೆಹೂದ್ಯರನ್ನೂ ಹಾಗೂ ಅನ್ಯರನ್ನು ಒಳಗೊಂಡಿದೆ ಎಂಬದೆ. ಯೆಹೂದ ಹಾಗೂ ಇಸ್ರಾಯೇಲನ್ನು ದೇವರು ರಾಜಕೀಯವಾಗಿ ಒಂದು ಮಾಡಿದ್ದರೂ, ಈ ಆತ್ಮೀಕ ಕುಟುಂಬದಲ್ಲಿ ಕ್ರಿಸ್ತನಲ್ಲಿರುವ ಅನ್ಯ ವಿಶ್ವಾಸಿಗಳೂ ಸಹ ಸೇರ್ಪಡೆಗೊಂಡಿರುವರು.

3. *ಹೊಸ ಒಡಂಬಡಿಕೆಯನ್ನು ಜನರ ಹೃದಯಗಳಲ್ಲಿ ಬರೆಯಲಾಗಿದೆ.* ಕ್ರಿಸ್ತನ ಸುವಾರ್ತೆಯಲ್ಲಿ, ನಿಯಮಗಳಲ್ಲಿ ಅಡಗಿರುವ ನೀತಿ ನಿಯಮಗಳು ಒಳಗೊಂಡಿರುವದಿಲ್ಲ, ಆದರೆ, ಪ್ರೀತಿಯುಳ್ಳ ರಕ್ಷಕನ ತ್ಯಾಗದ ತಿಳುವಳಿಕೆಯನ್ನು ಹೊಂದಿದವರು ಉತ್ತಮವಾದ ಜೀವಿತವನ್ನು ಜೀವಿಸಬೇಕು (ಆ ವಿಧವಾದ ಜೀವಿತವನ್ನು ಜೀವಿಸಬೇಕೆಂದು ವಾಕ್ಯಗಳಲ್ಲಿ ಬರೆದದೆ, ಅಂದರೆ "ನಿಯಮಗಳು" ಇನ್ನು ಇರುತ್ತವೆ). ದೇವರು ತನ್ನ "ಹೊಸ ನಿಯಮವನ್ನು" ಸುಲಭವಾಗಿ ನೀಡದೆ (ಹೊಸ ಆಜ್ಞೆಗಳು) ಆತನು ಹೊಸ ಮನೋಭಾವವನ್ನು ನೀಡಿ (ಕ್ರಿಸ್ತನ ಶಿಲುಬೆ), ಹೊಸ ಬಲವನ್ನೂ ನೀಡಿ (ಪರಿಶುದ್ಧಾತ್ಮ) ಅದರಲ್ಲಿ ನಾವು ಜೀವಿಸಬೇಕೆಂದು ಬಯಸುತ್ತಾನೆ (ಅಪೊಸ್ತಲರ ಕೃತ್ಯಗಳು 2:38; 5:32; ರೋಮಾಪುರ 8:6-14; ಎಫೆಸ 1:11-14).

4. *ಹೊಸ ಒಡಂಬಡಿಕೆಯ ಪಾಲುದಾರರು ಆ ಒಡಂಬಡಿಕೆಯ ದೇವರನ್ನು ಅರಿಯುವರು.* ಹಳೇ ಒಡಂಬಡಿಕೆಯಲ್ಲಿ ಅಬ್ರಹಾಮನ ದೈಹೀಕ ಸಂತಾನದವರೆಲ್ಲಾ ಒಳಗೊಂಡಿರುವರು. ಇಸ್ರಾಯೇಲ್ಯರ ವಂಶದಲ್ಲಿ ಹುಟ್ಟಿರುವವರೆಲ್ಲಾ ದೇವರಿಗೆ ವಿಧೇಯರು ಎಂಬ ಅರ್ಥವಲ್ಲ. ಆದರೆ ದೇವರು ಒಂದು ನಿರ್ಧಿಷ್ಟವಾದ ಜನಾಂಗದ ಒಟ್ಟಿಗೆ ಮಾಡಿಕೊಂಡ ರಾಷ್ಟ್ರೀಯ ಒಪ್ಪಂದವಾಗಿದೆ. ಹೊಸ ಒಡಂಬಡಿಕೆಯು ರಾಷ್ಟ್ರೀಯ ಮಟ್ಟದಲ್ಲಿರದ, ಅದು ಆತ್ಮೀಕ ಸ್ವಭಾವವನ್ನು ಹೊಂದಿರುತ್ತದೆ. ಒಬ್ಬನು ಅಥವಾ ಒಬ್ಬಳು ಯೇಸುವನ್ನು ದೇವರ ಮಗನೆಂದು ಮತ್ತು ಮೆಸ್ಸೀಯನೆಂದು ನಂಬದ ಹೊರತು, ಸ್ವಯಂ ದೀಕ್ಷಾಸ್ನಾನ ಹೊಂದದ ಹೊರತು ಆ ಒಡಂಬಡಿಕೆಯಲ್ಲಿ ಪಾಲು ತೆಗೆದುಕೊ ಳ್ಳಲು ಅಸಾಧ್ಯ (ಅಪೊಸ್ತಲರ ಕೃತ್ಯಗಳು 2:37, 38; ಗಲಾತ್ಯ 3:26, 27; ರೊಮಾಪುರ 6:3-5). ಒಡಂಬಡಿಕೆಯ ಜನರಾ ಗುವದಕ್ಕೆ ನಂಬಿಕೆಯು ಅಗತ್ಯವಿರುವದರಿಂದ, ಆ ಒಡಂಬಡಿಕೆಯಲ್ಲಿರುವವರಿಗೆ ಯಾರೂ ಸಹ "ದೇವರ ಕುರಿತು" ಬೋಧಿಸುವ ಅಗತ್ಯವಿರುವದಿಲ್ಲ. (ಒಡಂಬಡಿಕೆಯ ಹೊರಗೆ ಇರುವವರಿಗೆ ಬೋಧಿಸುವ ಅಗತ್ಯವಿದೆ ಮತ್ತಾಯ 28:18-20.)

5. *ಹೊಸ ಒಡಂಬಡಿಕೆಯು ಎಂದಿಗೂ ಮುರಿಯಲ್ಪಡುವದಿಲ್ಲ.* ಕ್ರಿಸ್ತನಲ್ಲಿರುವ ಈ ಹೊಸ ಒಡಂಬಡಿಕೆಯ ವಾಗ್ದಾನಗಳು ಹೇಗೆ ಮುರಿಯದೆ ಇರಲು ಸಾಧ್ಯ. ಹೌದು, ದೇವರು ಹೊಸ ಒಡಂಬಡಿಕೆಯ ತನ್ನ ಪಾತ್ರವನ್ನು ಈಡೇರಿಸುವನು - ಅದರಲ್ಲಿ ಅನೇಕ ಸಂಗತಿಗಳು ಒಳಗೊಂಡಿವೆ. ಸಭೆಯ ಈ ಹೊಸ ಒಡಂಬಡಿಕೆಯನ್ನು ಪರಿಪೂರ್ಣವಾಗಿ ಪಾಲಿಸಲು ಸಾಧ್ಯವೇ? ಇಲ್ಲ. ಒಬ್ಬನು ವೈಯಕ್ತಿಕವಾಗಿ ಹೊಸ ಒಡಂಬಡಿಕೆಯನ್ನು ನಿರಾಕರಿಸಿ, ಅದರಿಂದ ತನ್ನ ಭಾಗವನ್ನು ನಿರಂತರವಾಗಿ ಕಳಕೊಳ್ಳಲು ಸಾಧ್ಯವಿದೆ (ಗಲಾತ್ಯ 5:2-4;

ಇಬ್ರಿಯ 6), ಅದಾಗ್ಯೂ ಒಡಂಬಡಿಕೆಯು ಪರಿಪೂರ್ಣವಾಗಿಯೇ ಉಳಿದಿರುತ್ತದೆ. ಸಭೆಯು ಕ್ರಿಸ್ತನಲ್ಲಿ ದೊರೆತ ಒಡಂಬಡಿಕೆಗೆ ನಂಬಿಗಸ್ತವಾಗಿರಬೇಕು, ಇಲ್ಲವಾದಲ್ಲಿ ಅದು ಸಭೆಯಾಗಿರಲು ಅಸಾಧ್ಯ.

6. *ಹೊಸ ಒಡಂಬಡಿಕೆಗೆ ಅಂತ್ಯವಿಲ್ಲ.* ಇಬ್ರಿಯ ಪುಸ್ತಕದಲ್ಲಿ (ಹೊಸ ಒಡಂಬಡಿಕೆಯಲ್ಲಿನ ಅನೇಕ ವಿಚಾರಗಳು ಒಳಗೊಂಡಿರುವ ಪುಸ್ತಕ):

> ಪುರಾತನಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು, ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು (ಇಬ್ರಿಯ 1:1, 2).

ಯೇಸುವಿನ ಬರೋಣದ ನಿಮಿತ್ತ ನಾವುಗಳು "ಕಡೇ ದಿವಸಗಳನ್ನು" ಪ್ರವೇಶಿಸಿದ್ದೇವೆ ಈ ಸಮಯದಲ್ಲಿ ದೇವರು ತನ್ನ ಹೊಸ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುವನು. ಯೇಸು ಎಂಬದೇ ದೇವರ "ಕಡೇಯ ಪದವಾಗಿದೆ." ರಕ್ಷಣೆ ಪಡೆಯಲು ಇಚ್ಚಿಸುವವನು ಈತನಿಂದಲೇ ಪಡೆಯುವನು. ಈ ಒಡಂಬಡಿಕೆಯನ್ನು ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ ಇಬ್ರಿಯ 8:8-12ರಲ್ಲಿ ಯೆರೆಮೀಯ 31:31-34ರನ್ನು ಉಲ್ಲೇಖಿಸಲಾಗಿದೆ. ಈ ಹೊಸ ಒಡಂಬಡಿಕೆಯ ಈ ಭಾಗದಲ್ಲಿ ಈ ವಿಚಾರವನ್ನು ಪೂರ್ಣವಾಗಿ ವ್ಯಾಖ್ಯಾನಿಸಲಾಗಿದೆ. ಹಳೆ ಒಪ್ಪಂದವು ಅಂತ್ಯಗೊಳ್ಳುವದು ಎಂಬ ಪ್ರವಾದನೆಯನ್ನು ಯೆರೆಮೀಯನು ತಿಳಿಸಿರುವನು: ಮೊದಲಿದದ್ದನ್ನು ಹಳೇದಾಗಿ ಮಾಡಿದ್ದಾನೆ, ಆದರೆ ಹಳೆಯದಾಗುತ್ತಾ ಮುದಿಯಾಗುವಂಥದ್ದಕ್ಕೆ ಅಂತ್ಯವು ಸಮೀಪವಾಗಿದೆ (ಇಬ್ರಿಯ 8:13). ಅದಕ್ಕೆ ವ್ಯಕ್ತಿರಿಕ್ತವಾಗಿ ಹೊಸ ಒಪ್ಪಂದವು ನಿರಂತರವಾಗಿರುತ್ತದೆ.

7. *ಹೊಸ ಒಡಂಬಡಿಕೆಯು ಪೂರ್ಣವಾದ ಪಾಪಕ್ಷಮೆಯನ್ನು ತರುತ್ತದೆ.* ಹಳೆ ಒಪ್ಪಂದದಲ್ಲಿ ಯಜ್ಞಗಳು ಅಗತ್ಯವಿದ್ದರೂ (ವಿವರಣೆಗೆ ಯಾಜಕಕಾಂಡ ನೋಡುವದು). ಅದರಮೂಲಕ ಇಸ್ರಾಯೇಲ್ಯರ ಮತ್ತುದೇವರ ನಡುವಿನ ಅನ್ಯೋನ್ಯತೆ ಕಟ್ಟಲ್ಪಟ್ಟಿತ್ತು, ಅದಾಗ್ಯೂ ಏನೋ ಒಂದು ಕೊರತೆಯು ಎದ್ದು ಕಾಣಿಸುತ್ತಿತ್ತು. ಅವುಗಳು ಪಾಪವನ್ನು ನಿರಂತರವಾಗಿ ತೆಗೆಯಲಿಲ್ಲ. ಇದರ ಪರಿಣಾಮವಾಗಿ ಅವರು ಅದನ್ನು ಪದೇ ಪದೇ ಮಾಡ ಬೇಕಿತ್ತು. ಪಾಪವನ್ನು ನಿರಂತರವಾಗಿ ತೆಗೆದುಹಾಕಲು, ಯೆರೆಮೀಯನ ಪ್ರವಾದನೆಯಲ್ಲಿ ವಾಗ್ದಾನಗಳನ್ನು ನೀಡಲಾಗಿದೆ. ಅದು ಪಾಪದ ನಿವಾರಣೆಯ ಕುರಿತು ಪದೇ ಪದೇ ನೆನಪು ಮಾಡುತ್ತಿತ್ತು. ಯೇಸುವಿನ ಮರಣವು ಈ ಕಾರ್ಯವನ್ನು ಬದಲಾಯಿಸಿತು ಎಂದು ಇಬ್ರಿಯ ಪುಸ್ತಕ ಹೇಳುತ್ತದೆ. ಈ ಹಿಂದಿನ ಯಜ್ಞಗಳು ಬದಲು ಮಾಡದಂಥ ಕಾರ್ಯಗಳನ್ನು ಯೇಸುವಿನ ಯಜ್ಞವು ನೆರವೇರಿಸಿತು:

> ಆದರೆ ಕ್ರಿಸ್ತನು ಈಗ ದೊರೆತಿರುವ ಮೇಲುಗಳನ್ನು ಕುರಿತು ಮಹಾಯಾಜಕನಾಗಿ ಬಂದು ಕೈಯಿಂದ ಕಟ್ಟಲ್ಪಡದಂಥ ಅಂದರೆ ಈ ಸೃಷ್ಟಿಗೆ ಸಂಬಂಧಪಡದಂಥ ಘನವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ಸೇವೆಯನ್ನು ಮಾಡುವವನಾಗಿ ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು ...
>
> ಮತ್ತು ಈ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆಯ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆಯ ಒಡಂಬಡಿಕೆಯ

ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು ಮರಣವನ್ನು ಅನುಭವಿಸಿದ್ಧರಿಂದ ದೇವರಿಂದ ಕರೆಯಿಸಿಕೊಂಡವರು ವಾಗ್ದಾನವಾಗಿದ್ದ ನಿತ್ಯಬಾಧ್ಯತೆಯನ್ನು ಹೊಂದುವದಕ್ಕೆ ಆತನ ಮೂಲಕ ಮಾರ್ಗವಾಯಿತು (ಇಬ್ರಿಯ 9:11-15).

ಯಾಕಂದರೆ ಕ್ರಿಸ್ತನು ನಿಜವಾದ ದೇವಾಲಯಕ್ಕೆ ಅನುರೂಪಮಾತ್ರವಾದದ್ದಾಗಿಯೂ ಕೈಯಿಂದ ಕಟ್ಟಿದ್ದಾಗಿಯೂ ಇರುವ ಆಲಯದಲ್ಲಿ ಪ್ರವೇಶಿಸದೇ ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುವದಕ್ಕೆ ಪರಲೋಕದಲ್ಲಿಯೇ ಪ್ರವೇಶಿಸಿದನು. ಇದಲ್ಲದೆ ಮಹಾಯಾಜಕನು ವರುಷ ವರುಷವೂ ಅನ್ಯ ರಕ್ತವನ್ನು ತೆಗೆದುಕೊಂಡು ಪವಿತ್ರಾಲಯದಲ್ಲಿ ಪ್ರವೇಶಿಸುವ ಪ್ರಕಾರ ಆತನು ತನ್ನನ್ನು ಅನೇಕ ಸಾರಿ ಸಮರ್ಪಿಸುವದಕ್ಕೆ ಪರಲೋಕದಲ್ಲಿ ಪ್ರವೇಶಿಸಲಿಲ್ಲ; ಹಾಗೆ ಸಮರ್ಪಿಸಬೇಕಾಗಿದ್ದ ಪಕ್ಷದಲ್ಲಿ ಆತನು ಲೋಕಾದಿಯಿಂದ ಎಷ್ಟೋ ಸಾರಿ ಬಾಧೆಪಟ್ಟು ಸಾಯಬೇಕಾಗಿತ್ತು. ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು. ಒಂದೇ ಸಾರಿ ಸಾಯುವದೂ ಆ ಮೇಲೆ ನ್ಯಾಯ ತೀರ್ಪು ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹು ಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು, ಮತ್ತು ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟು ಮಾಡುವದಕ್ಕೋಸ್ಕರ ಪಾಪ ಸಂಬಂಧವಿಲ್ಲದವನಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವನು (ಇಬ್ರಿಯ 9:24-28).

## ಹೊಸ ಒಡಂಬಡಿಕೆಯ ಕಾರ್ಯಗಳು

ಒಬ್ಬನು ಬರುವ ಮೂಲಕ, ಹೊಸ ಒಡಂಬಡಿಕೆಯಲ್ಲಿ ಉಂಟಾಗಬಹುದಾದ ಪರಿಣಾಮಗಳನ್ನು ಯೆರೆಮೀಯನು ತಿಳಿಸದೆ ಹೋದರೂ, ಹೊಸ ಒಡಂಬಡಿಕೆಯ ಪುಸ್ತಕದಲ್ಲಿನ - ಇಬ್ರಿಯ ಪುಸ್ತಕದಲ್ಲಿ ಇದನ್ನುಬಹು ಸ್ಪಷ್ಟವಾಗಿ ತಿಳಿಸಲಾಗಿದೆ. ಸತ್ಯವೇದವನ್ನು ಅನುವಾದ ಮಾಡುವಾಗ ಈ ಹೊಸ ಒಡಂಬಡಿಕೆಯಲ್ಲಿನ ಬದಲಾವಣೆಗಳನ್ನು ಅಲಕ್ಷಮಾಡಲಾಗಿದೆ; ಅದರ ಪರಿಣಾಮವಾಗಿ ಅನೇಕ ಅಪಾರ್ಥಗಳು ಉಂಟಾಗಿವೆ. ಹೊಸ ಒಡಂಬಡಿಕೆಯಲ್ಲಿನ ಕೆಲವು ಪರಿಣಾಮಗಳನ್ನು ಇಬ್ರಿಯ ಪುಸ್ತಕದಿಂದ ಈ ಕೆಳಗೆ ಇಬ್ರಿಯ 8-10ನ್ನು ಸ್ಪಷ್ಟಿಕರಿಸಲಾಗಿದೆ:

1. *ಯೇಸುವಿನ ನಿಮಿತ್ತವಾಗಿ, ಹಳೆಯ ಒಪ್ಪಂದದ ಯಾಜಕತ್ವವನ್ನು ನಿರ್ಮೂಲ ಮಾಡಲಾಗಿದೆ* (ನೋಡಿರಿ 7:1-8:13). ಯೇಸು ಈಗ ಮಹಾಯಾಜಕನಾಗಿರುವದರಿಂದ, ನಮಗೆ ಬೇರೆಯವರ ಅಗತ್ಯತೆ ಇಲ್ಲ. ಕ್ರಿಸ್ತನು ಮಾತ್ರ ನ್ಯಾಯಬದ್ಧವಾದ ಯಾಜಕನಾಗಿದ್ದಾನೆ ಎಂದು ಹೊಸ ಒಡಂಬಡಿಕೆ ತಿಳಿಸುತ್ತದೆ. ಕ್ರೈಸ್ತರಾದ ನಮ್ಮನ್ನು "ರಾಜವಂಶಸ್ಥರಾದ ಯಾಜಕರು" ಎಂದು ಕರೆಯಲಾಗಿದೆ (1 ಪೇತ್ರ 2:9, 10). ಮತ್ತು ಕೆಲವು ಸಾರಿ "ವಿಶ್ವಾಸಿಗಳೆಲ್ಲರು ಯಾಜಕರು" ಎಂದು ಕರೆಯಲ್ಪಟ್ಟಿದ್ದೇವೆ. ಕ್ರಿಸ್ತನು ಮಧ್ಯ ವರ್ತಿಯಾಗಿರುವದರಿಂದ, ಮಾನವರ ಮಧ್ಯಸ್ಥಿಕೆಯು ಅಗತ್ಯವಿರುವದಿಲ್ಲ, ಪೌಲನು 1 ತಿಮೋಥೆ 2:5ರಲ್ಲಿ ಹೇಳಿರುವಂತೆ, "ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ."

2. *ಯೇಸುವಿನ ನಿಮಿತ್ತವಾಗಿ ಹಳೆಯದಾದ ಆರಾಧನಾ ಸ್ಥಳವನ್ನು ಬದಲಾಯಿಸಲಾಗಿದೆ* (ನೋಡಿರಿ 9:1-11). ಕ್ರಿಸ್ತನ ಮೂಲಕದ ಆರಾಧನೆಯನ್ನು ಮಾಡಲು ಒಂದು ನಿರ್ದಿಷ್ಟವಾದ ಸ್ಥಳವನ್ನು ನಿಗಧಿಪಡಿಸಿರುವದಿಲ್ಲ. ದೇವದರ್ಶನದ ಗುಡಾರ (ಇಸ್ರಾಯೇಲ್ಯರ ಸಾಗಿಸಬಲ್ಲ ಗುಡಾರ)ದಲ್ಲಿ ಹಾಗೂ ದೇವಾಲಯದಲ್ಲಿ ಇಸ್ರಾಯೇಲ್ಯರು ತಮ್ಮ ಯಜ್ಞವನ್ನು

ಸಮರ್ಪಿಸುತ್ತಿದ್ದರು, ಆದರೆ ಕ್ರೈಸ್ತ ನಂಬಿಕೆಯ ಯಾವುದೋ ಒಂದು ಭೋಗೋಳದ ಪ್ರವೇಶವನ್ನು ಹೊಂದಿರುವದಿಲ್ಲ. ಅದು ಜನರ ಹೃದಯದಲ್ಲಿ, ಅಂದರೆ ನಂಬಿಕೆ ಹಾಗೂ ವಿಧೇಯತೆಯನ್ನು ಹೊಂದಿರುವಲ್ಲಿ ಇರುತ್ತದೆ (ಯೋಹಾನ 4:21-24). ಕ್ರೈಸ್ತರು ಆತನನ್ನು ಎಲ್ಲಿಯಾದರೂ, ಯಾವ ಸ್ಥಳದಲ್ಲಿಯಾದರೂ ಆರಾಧಿಸಬಹುದು.

3. *ಕ್ರಿಸ್ತನ ನಿಮಿತ್ತವಾಗಿ, ಹಳೇ ಒಪ್ಪಂದದ ಯಜ್ಞಗಳನ್ನು ನಿಷೇಧಿಸಲಾಗಿದೆ* (ನೋಡಿರಿ 9:12-10:18). ತಾತ್ಕಾಲಿಕವಾದ ಆ ಯಜ್ಞಗಳಲ್ಲಿ ಕಂಡುಬಂದ ನ್ಯೂನತೆಗಳನ್ನು, ಯೇಸು ಜನರೆಲ್ಲರಿಗಾಗಿ ಮಾಡಿದ ಪರಿಪೂರ್ಣವಾದ ಯಜ್ಞದಲ್ಲಿ ಸರಿದೂಗಿಸಲಾಗಿದೆ. ಲೋಕದ ಪಾಪಕ್ಕಾಗಿ, "ದೇವರ ಕುರಿಮರಿಯು" ಕೊಯ್ಯಲ್ಪಟ್ಟಿರುವಾಗ, ಆ ಹಳೆಯ ಯಜ್ಞಗಳು ಹೇಗೆ ಚಲಾವಣೆಯಲ್ಲಿರಲು ಸಾಧ್ಯ?

4. *ಕ್ರಿಸ್ತನ ನಿಮಿತ್ತವಾಗಿ, ಹಳೇ ಒಡಂಬಡಿಕೆಯ ಗ್ರಂಥಗಳನ್ನು ಹೊಸ ಒಡಂಬಡಿಕೆಯ ಗ್ರಂಥಗಳು ಮೀರಿಸುತ್ತವೆ.* ಇದರ ನಿಯಮಗಳನ್ನು ಇಬ್ರಿಯ ಪತ್ರಿಕೆಯಲ್ಲಿ ತಿಳಿಸದೆ ಇದ್ದರೂ, ಅದರ ಕುರಿತ ಕುರುಹುಗಳನ್ನು ಕಾಣುತ್ತೇವೆ. ಹೊಸ ಒಡಂಬಡಿಕೆಯ ಬರಹಗಾರರು ವಿವರಿಸಿರುವ ಅರ್ಥದಲ್ಲೂ, ಪ್ರಾಮುಖ್ಯತೆಯಲ್ಲೂ, ಹಳೇ ಒಡಂಬಡಿಕೆಯು ಮುಂತಿಳಿಸಿದ ವಿಚಾರಗಳಿಗೆ ಹೆಚ್ಚಿನ ಗಮನವನ್ನು ನೀಡಬೇಕೆಂದು ತಿಳಿಯುತ್ತೇವೆ. ಇವುಗಳಿಂದ ಹೊಸ ಒಡಂಬಡಿಕೆಯನ್ನು ಮಾತ್ರ ಅರ್ಥಮಾಡಿಕೊಳ್ಳದೆ, ಹಳೇ ಒಡಂಬಡಿಕೆಯ ಅನುವಾದವನ್ನು ಸಹ ಸರಿಯಾಗಿ ಅರಿಯುತ್ತೇವೆ. ಹೊಸ ಒಡಂಬಡಿಕೆಯ ಒಪ್ಪಂದವನ್ನು ಓದುವ ಮೂಲಕ ನಾವುಗಳು ಹಳೇ ಒಪ್ಪಂದವನ್ನು ಅರಿಯಲು ಸಾಧ್ಯವಾಗುತ್ತದೆ.

ದೇವರ ಚಿತ್ತದ ಪ್ರಕಟನೆಯು ಪ್ರಗತಿಯಲ್ಲಿರುತ್ತದೆ; ಆತನು ತನ್ನ ಪ್ರಗತಿಪರವಾದ ಯೋಜನೆಯನ್ನು ಹಾಗೂ ಗುರಿಯನ್ನು ತನ್ನ ಸೃಷ್ಟಿಗೆ ತಿಳಿಸಿರುವನು. ಅದೇ ರೀತಿಯಲ್ಲಿ ಸತ್ಯವೇದದಲ್ಲಿ ಬರೆದಿರುವ ಪ್ರಕಟನೆಗಳು ಸಹ ಪ್ರಗತಿ ಪರವಾಗಿರುತ್ತದೆ. ಹಳೇ ಒಡಂಬಡಿಕೆಯಲ್ಲಿ, ಯಾವ ಸಂಗತಿಗಳು ಪ್ರಮುಖವಾಗಿದ್ದವೋ (ಯಾಜಕ ವೃತ್ತಿ ಹಾಗೂ ಯಜ್ಞಗಳು) ಆ ಸಂಗತಿಗಳನ್ನು ಕ್ರಿಸ್ತನ ಬರೋಣದ ಬೆಳಕಿನಲ್ಲಿ ಪರಿಶೀಲಿಸಬೇಕು. ಇದು ಕ್ರೈಸ್ತರ ಕರ್ತವ್ಯವಾಗಿರುತ್ತದೆ. ಹಳೇಯ ಸಂಗತಿಗಳನ್ನು "ನಮ್ಮ ಉಪದೇಶಕ್ಕಾಗಿ" ಬರೆಯ ಲ್ಪಟ್ಟಿದೆ ಎಂದು ಇರುವದರಿಂದ, ಅವುಗಳು ಪ್ರಾಮುಖ್ಯತೆ ಸಲ್ಲ ಎಂದು ತಿಳಿಯಬಾರದು (ರೋಮಾಪುರ 15:4; 1 ಕೊರಿಂಥ 10:6-11). ಅವುಗಳಿಂದ ನಾವುಗಳು ಕಲಿಯಬಹುದು, ಮತ್ತು ಅವುಗಳು ದೇವರ ವಾಕ್ಯವೇ ಆಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ ಮಾಡಿರುವಂತೆ, ಅವುಗಳನ್ನು ಮೆಸ್ಸೀಯನಾದ ಯೇಸುವಿನ ಬೆಳಕಿ ನಡಿಯಲ್ಲಿ ಪರಿಶೀಲಿಸಬೇಕು.

ಹಳೇ ಒಡಂಬಡಿಕೆಯ ಆತನ ಜನರಾದ ಇಸ್ರಾಯೇಲ್ಯರಿಗೆ ದೇವರಿಂದ ನೀಡಲಾದ ಅದ್ಭುತವಾದ ಬಹುಮಾನವಾಗಿದೆ. ಆತನು ಅವರನ್ನು ತನ್ನ ಅನ್ಯೋನ್ಯತೆಗೆ ಸೇರಿಸಿಕೊಂಡ ಕರುಣೆಯುಳ್ಳ ಹಾಗೂ ದಯೆಯ ಕ್ರಿಯೆಯಾಗಿರುತ್ತದೆ. ಆದರೆ ಅವರು ಆ ಮಹತ್ವದ ಕರೆಗೆ ಅವಿಧೇಯರಾದರಲ್ಲವೇ? ಆದರೆ ಆತನು ಕರುಣಾ ಹಗೂ ದಯಾಮಯನಾಗಿರುವದರಿಂದ, ಅವರನ್ನು ಆ ಪರಿಸ್ಥಿತಿಯಲ್ಲಿ ಬಿಡಲಿಲ್ಲ. ಆತನು ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಂಡು, ಅದನ್ನು ತನ್ನ ಮಗನ ಯಜ್ಞದಲ್ಲಿ ನೆರವೇರಿಸಿದನು. ದೇವರು ನಮಗೆ ಕೃಪೆಯಿಂದ ನೀಡಿರುವ ಒಡಂಬಡಿಕೆಯಿಂದ ನಾವುಗಳು ಆತನಿಗೆ ನಂಬಿಗಸ್ತರಾಗಿರುವ ಅವಕಾಶವನ್ನು ಹೊಂದಿದ್ದೇವೆ.

---

## ಹಳೆಯ ಮತ್ತು ಹೊಸ "ಒಡಂಬಡಿಕೆಗಳು"

ಸತ್ಯವೇದವು ಎಂದು ಒಡಂಬಡಿಕೆಗಳನ್ನು ಹೊಂದಿದ್ದು, ಹಳೆ ಮತ್ತು ಹೊಸ ಒಡಂಬಡಿಕೆ ಎಂದಿರುತ್ತವೆ. ಇಬ್ರಿಯ ಪುಸ್ತಕದಲ್ಲಿ (ನೋಡಿರಿ 9:15). ಯೆರೆಮೀಯನು ತಿಳಿಸಿದ ಸಂಗತಿಗಳು ಅಡಕವಾಗಿವೆ. ಹಳೇ ಒಡಂಬಡಿಕೆಯು ಇಸ್ರಾಯೇಲ್ಯರೊಂದಿಗಿದ ದೇವರ

ವಹಿವಾಟನ್ನು ತಿಳಿಸಿದರೆ, ಹೊಸ ಒಡಂಬಡಿಕೆಯ ಯೇಸು ಕ್ರಿಸ್ತನೊಂದಿಗಿನ ಸಂಬಂಧವನ್ನು ತಿಳಿಸುತ್ತದೆ.

ಸತ್ಯವೇದದ ಎರಡು ಒಡಂಬಡಿಕೆಗಳನ್ನು, "ಹಳೆಯ ಹಾಗೂ ಹೊಸ ಒಪ್ಪಂದ ಎಂದು ತಿಳಿಯಬೇಕು" ಸತ್ಯವೇದವನ್ನು ಲ್ಯಾಟಿನ್ ಭಾಷೆಯಲ್ಲಿ ಅನುವಾದಿಸುವಾಗ, *ಟೆಸ್ಟ್‌ಮೆಂಟಮ್* (ಟೆಸ್ಟ್‌ಮೆಂಟ್) ಎಂದಿದ್ದು, ಅದನ್ನು ಗ್ರೀಕ್ ಪದದಲ್ಲಿ (*"ಡಯತೇಕೆ"* ಒಡಂಬಡಿಕೆ) ಎನ್ನಲಾಗಿದೆ. ಇಂಗ್ಲಿಷ್‌ನಲ್ಲಿ ಅದಕ್ಕೆ ಸಮವಾಗಿ "ಟೆಸ್ಟ್‌ಮೆಂಟ್" ಎಂಬ ಪದವನ್ನು ಬಳಸಲಾಗಿದೆ. ಅದರ ಪರಿಣಾಮವಾಗಿ "ಹಳೆಯ" ಹಾಗೂ "ಹೊಸ" ಒಡಂಬಡಿಕೆ ಎಂದಿರುತ್ತದೆ. ಎರಡು ಒಡಂಬಡಿಕೆಗಳನ್ನು ವಿವರಿಸುವ ಪರಿಯಾಗಿದೆ. ಅದರ ಬರವಣಿಗೆಯಲ್ಲಿ ಬಹಳ ಎಚ್ಚರ ವಹಿಸಲಾಗಿದೆ.

---

## ದೇವರು ಮರೆಯಲು ಸಾಧ್ಯವೇ?

"ಅವರ ಪಾಪವನ್ನು ಎಂದಿಗೂ ನೆನಪು ಮಾಡುವದಿಲ್ಲ" ಎಂದು ದೇವರು ಈ ಒಡಂಬಡಿಕೆಯಲ್ಲಿ ವಾಗ್ದಾನ ಮಾಡಿರುವನು (ಯೆರೆಮೀಯ 31:34). ನೆನಪು ಮಾಡದೆ ಇರುವದನ್ನು ಅನರ್ಹ, ಬಲಹೀನತೆ, ಗತಿಸಿದ ಸಂಗತಿಗಳನ್ನು ನೆನಪುಮಾಡುವ ಶಕ್ತಿಯನ್ನು ಕಳಕೊಂಡಿರುವದು, ಎಂದು ತಿಳಿಯುವಾಗ, ಸರ್ವಶಕ್ತನಾದ ದೇವರು "ಪಾಪಗಳನ್ನು" ಮರೆತು ಬಿಡಲು ಹೇಗೆ ಸಾಧ್ಯ?

ನಾವು ಹಾಗೂ ನೀವು ಮರೆಯುವಂತೆ, ದೇವರು ಮರೆತು ಬಿಡುವವನಲ್ಲ, ದೇವರು ಪಾಪವನ್ನು ಮರೆಯುವಂತೆ, ನಮಗೆ ತಪ್ಪು ಮಾಡಿದ ಜನರ ಪಾಪಗಳನ್ನು ನಾವುಗಳು ಸಹ ಮರೆಯಬೇಕೆಂಬುದೇ. ಹಳೇ ಮತ್ತು ಹೊಸ ಒಡಂಬಡಿಕೆಯಂತೆ ದೇವರು ನಮ್ಮ ಸೋಲನ್ನು ಸ್ಪಷ್ಟವಾಗಿ ಅರಿಯುತ್ತಾನೆ; ಆದರೆ ಕ್ರಿಸ್ತನಿಂದಾದ ಕ್ಷಮೆಯಲ್ಲಿ, ನಾವುಗಳು ಯಾವ ಪಾಪವನ್ನು ಮಾಡಿಲ್ಲವೆಂದು ಪರಿಗಣಿಸುತ್ತಾನೆ.

ದೇವರ ಹಾಗೆ ನಾವು "ಕ್ಷಮಿಸಿ" ಮರೆಯಬೇಕು ಎಂದು ಕೆಲವರು ಹೇಳುತ್ತಾರೆ, ಅಂದರೆ ಇತರರು ನಮಗೆ ಮಾಡುವ ತಪ್ಪುಗಳನ್ನು ನಾವು ಮರೆಯಬೇಕು ಎಂದು ಸೂಚನೆ ಇದಾಗಿರುತ್ತದೆ. ಈ ತತ್ವದಂತೆ ನಾವುಗಳು ದೇವರ ಹಾಗೆ "ಕ್ಷಮಿಸಿ" "ಮರೆಯಲು" ಸಾಧ್ಯ.

> ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು. ತಂದಿದ್ದ ಪಕ್ಷದಲ್ಲಿ ಆ ಯಜ್ಞಸಮರ್ಪಣೆಯು ನಿಂತುಹೋಗುತ್ತಿತ್ತಲ್ಲಾ. ಯಾಕಂದರೆ ದೇವಾರಾಧನೆ ಮಾಡುವವರು ಒಂದೇ ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ ಪಾಪವುಂಟೆಂದು ಅವರ ಮನಸ್ಸು ಇನ್ನೂ ಸಾಕ್ಷಿಕೊಡುವದು ಹೇಗೆ? ಆದರೆ ಆ ಯಜ್ಞಗಳಿಂದ ಪ್ರತಿವರುಷದಲ್ಲಿಯೂ ಪಾಪಗಳ ಜ್ಞಾಪಕವಾಗುವದುಂಟು; ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ (ಇಬ್ರಿಯ 10:1-4).

ಯೇಸುವಿನ ಮರಣದಲ್ಲಿ ಯೆರೆಮೀಯನ ಪ್ರವಾದನೆಯು ನೆರವೇರಿರುತ್ತದೆ. ಹೊಸ ಒಡಂಬಡಿಕೆಯಲ್ಲಿ ನಂಬಿಕೆ ಇರುವವರ ಪಾಪದೋಷಗಳು ಪರಿಹಾರವಾಗಿವೆ, ಅವುಗಳ ನೆನಪು ಇರುವದಿಲ್ಲ. ಯೇಸುವಿನ ಈ ಕಥೆಯೇ "ಶುಭ ಸಂದೇಶವಾಗಿದೆ"!